*ಬೆಂಗಳೂರಿನಲ್ಲಿ ಮೇಲು ಸೇತುವೆಗಳ ನಿರ್ಮಾಣ.*

2414(3402) ಶ್ರೀ ರಾಮಲಿಂಗರೆಡ್ಡಿ (ಜಯನಗರ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಹೊಸದಾಗಿ ಎಷ್ಟು ಮೇಲು ಸೇತುವೆಗಳನ್ನು ನಿರ್ಮಿಸಲಾಗುವುದು;

ಆ) ಎಲ್ಲೆಲ್ಲಿ ಈ ಮೇಲು ಸೇತುವೆಗಳನ್ನು ನಿರ್ಮಿಸಲಾಗುವುದು? ಹಾಗೂ ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಇ) ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಸಣ್ಣ ಸೇತುವೆಗಳನ್ನು ನಿರ್ಮಿಸಲಾಗುವುದು?

ಈ) ಈ ಸಾಲಿನಲ್ಲಿ ಯಾವ ಯಾವ ಮೇಲು ಸೇತುವೆ ಕಾಮಗಾರಿಗಳು ಪ್ರಾರಂಭವಾಗುತ್ತಿವೆ.

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ಸುಮಾರು 22 ಸಂಚಾರಿ ಕೂಡು ಸ್ಥಳಗಳನ್ನು ಗುರ್ತಿಸಲಾಗಿದೆ. ಈ ಬಗ್ಗೆ ಕಾರ್ಯಸಾಧ್ಯತೆ ಅಧ್ಯಯನಗಳನ್ನು ತೆಗೆದುಕೊಳ್ಳಲಾಗಿದೆ. ಸರಿಯಾದ ಸಂಖ್ಯೆಯನ್ನು ಅಧ್ಯಯನ ವರದಿ ಬಂದ ನಂತರ ಅಂತಿಮ ಗೊಳಿಸಲಾಗುವುದು.

ಆ) ಕಾರ್ಯಸಾಧ್ಯತೆ ವರದಿ ಬಂದ ನಂತರ ಪ್ರತಿ ಜಾಗದ ವಿನ್ಯಾಸ ತಯಾರಿಸಿದ ನಂತರ ನಿಖರವಾದ ಜಾಗಗಳು ಮತ್ತು ಅವುಗಳಿಗೆ ತಗಲಬಹುದಾದ ವೆಚ್ಚದ ವಿವರಗಳು ಲಭ್ಯವಾಗುತ್ತವೆ.

ಇ) -ಅದೇ-

ಈ) ಕಾಮಗಾರಿಗಳ ಆದ್ಯತೆಯನ್ನು ಕಾರ್ಯ ಸಾಧ್ಯತೆ ವರದಿಗಳು ಪೂರ್ಣಗೊಂಡ ನಂತರ ಮತ್ತು ಹಣಕಾಸು ಸಂಸ್ಥೆಗಳ ಮುಂದೆ ಮಂಡಿಸಿ ನಂತರ ತೀರ್ಮಾನಿಸಲಾಗುವುದು.

*ಮೈಸೂರಿನಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶದ ಅಭಿವೃದ್ಧಿ ಮಂಡಳಿಯ ಯೋಜನೆಗಳು.*

2417(3409) ಶ್ರೀ ರಾಮದಾಸ್ ಎ. (ಕೃಷ್ಣರಾಜ) :— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹೆಬ್ಬಾಳು, ಬೆಳಗುಳ, ಮೆಟಗಳ್ಳಿ, ಬೆಳವಾಡಿ ಹಾಗೂ ಹೂಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಎಷ್ಟು ಎಕರೆ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿದೆ;

ಆ) ಕಳೆದ 3 ವರ್ಷಗಳಲ್ಲಿ ಎಷ್ಟು ಎಕರೆ ಪ್ರದೇಶವನ್ನು ಎಷ್ಟು ಉದ್ಯಮಿಗಳಿಗೆ ಯಾವ ಯಾವ ವರ್ಷದಲ್ಲಿ ಮಂಜೂರು ಮಾಡಿದೆ.

ಇ) ಪರಿಶಿಷ್ಟ ಜಾತಿ : ವರ್ಗ ಮಹಿಳೆಯರು, ಮತೀಯ ಅಲ್ಪ ಸಂಖ್ಯಾತರ ವರ್ಗಕ್ಕೆ ಸೇರಿದ ಎಷ್ಟು ಉದ್ಯಮಿಗಳಿಗೆ ಎಷ್ಟು ಎಕರೆ ಪ್ರದೇಶವನ್ನು ನೀಡಲಾಗಿದೆ.

ಈ) ಪ್ರಸ್ತುತ ಯಾವ ಯಾವ ಪ್ರಮಾಣದ ನಿವೇಶನ, ಎಷ್ಟು ಎಕರೆ ನಿವೇಶನ ಉಳಿದಿದೆ, ನಿವೇಶನ ಸಂಖ್ಯೆ ಸಹಿತ ವಿವರ ನೀಡುವುದು?

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಮೈಸೂರಿನಲ್ಲಿ ಅಭಿವೃದ್ಧಿಪಡಿಸಿರುವ ಕೈಗಾರಿಕಾ ಕ್ಷೇತ್ರಗಳ ವಿವರ ಈ ಕೆಳಗಿನಂತೆ ನಮೂದಿಸಿದೆ.

| ಕ್ರ. ಸಂ. | ಕೈಗಾರಿಕಾ ಪ್ರದೇಶದ ಹೆಸರು | ಎಕರೆಗಳಲ್ಲಿ |
|---|---|---|
| 01. | ಹೆಬ್ಬಾಳು ಕೈಗಾರಿಕಾ ಪ್ರದೇಶ | 1603-05 |
| 02. | ಬೆಳಗೊಳ - ಮೇಟಗಳ್ಳಿ | 519-85 |
| 03. | ಬೆಳವಾಡಿ ಕೈಗಾರಿಕಾ ಪ್ರದೇಶ | 238-80 |
| 04. | ಹೂಟಗಳ್ಳಿ ಕೈಗಾರಿಕಾ ಪ್ರದೇಶ | 877-95 |
| | ಒಟ್ಟು ವಿಸ್ತೀರ್ಣ | 3238.75 |

ಮೇಲಿನ ವಿಸ್ತೀರ್ಣವನ್ನು ಕೈಗಾರಿಕಾ ಪ್ರದೇಶವನ್ನಾಗಿ ಅಭಿವೃದ್ಧಿಪಡಿಸಿದೆ.

ಆ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಮೈಸೂರು ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಕೈಗಾರಿಕಾ ಘಟಕಗಳಿಗೆ ಭೂ ಹಂಚಿಕೆ ಮಾಡಿರುವ ವಿವರ ಈ ಕೆಳಗಿನಂತಿದೆ.

| ಕೈಗಾರಿಕಾ ಪ್ರದೇಶದ ಹೆಸರು | ಭೂ ಹಂಚಿಕೆ ಮಾಡಿದ ವರ್ಷದ ವಿವರ | | | | | |
|---|---|---|---|---|---|---|
| | 1998-99 | | 1999-2000 | | 2000-01 | |
| | ಘಟಕದ ಸಂಖ್ಯೆ | ವಿಸ್ತೀರ್ಣ ಎ.-ಗುಂಟೆ | ಘಟಕದ ಸಂಖ್ಯೆ | ವಿಸ್ತೀರ್ಣ ಎ.-ಗುಂಟೆ | ಘಟಕದ ಸಂಖ್ಯೆ | ವಿಸ್ತೀರ್ಣ ಎ.-ಗುಂಟೆ |
| ಹೆಬ್ಬಾಳು | 2 | 1.25 | 18 | 17.00 | 10 | 225.25 |
| ಹೂಟಗಳ್ಳಿ | 13 | 15.00 | 23 | 8.35 | 21 | 11.75 |
| ಬೆಳವಾಡಿ | - | - | 1 | 1.00 | 1 | - |
| ಬೆಳಗೊಳ | 1 | 0.25 | 1 | 0.25 | 2 | 2.25 |
| ಒಟ್ಟು | 16 | 16.50 | 43 | 27.60 | 33 | 239.25 |

ಮೇಲ್ಕಂಡ ಕೈಗಾರಿಕಾ ಪ್ರದೇಶದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಮಹಿಳೆಯರು ಮತ್ತೀಯ ಅಲ್ಪ ಸಂಖ್ಯಾತರಿಗೆ ಕಳೆದ 3 ವರ್ಷಗಳಲ್ಲಿ ಭೂ ಹಂಚಿಕೆ ಮಾಡಿರುವ ವಿವರಗಳು ಈ ಕೆಳಕಂಡಂತೆ ಇದೆ.

| ಕೈಗಾರಿಕಾ ಪ್ರದೇಶದ ಹೆಸರು | ಪರಿಶಿಷ್ಟ ಜಾತಿ : ವರ್ಗ | | ಮಹಿಳೆಯರು | | ಮತೀಯ ಅಲ್ಪಸಂಖ್ಯಾತರು | |
|---|---|---|---|---|---|---|
| | ಘಟಕದ ಸಂಖ್ಯೆ | ವಿಸ್ತೀರ್ಣ ಎ.-ಗುಂಟೆ | ಘಟಕದ ಸಂಖ್ಯೆ | ವಿಸ್ತೀರ್ಣ ಎ.-ಗುಂಟೆ | ಘಟಕದ ಸಂಖ್ಯೆ | ವಿಸ್ತೀರ್ಣ ಎ.-ಗುಂಟೆ |
| ಹೆಬ್ಬಾಳು | 2 | 2.00 | 4 | 2.50 | 1 | 1.00 |
| ಹೂಟಗಳ್ಳಿ | 3 | 1-00 | 13 | 3-50 | - | - |

ಈ) ಮೇಲ್ಕಂಡ ಕೈಗಾರಿಕಾ ಪ್ರದೇಶದಲ್ಲಿ ಹಾಲಿ ಖಾಲಿ ಇರುವ ನಿವೇಶನ ಸಂಖ್ಯೆ ಮತ್ತು ವಿವರ ಈ ಕೆಳಗಿನಂತೆ ಇದೆ;

ಸಂ ಬ - ೧

| ಕೈಗಾರಿಕಾ ಪ್ರದೇಶದ ಹೆಸರು | ಖಾಲಿ ನಿವೇಶನ ಸಂಖ್ಯೆ | ವಿಸ್ತೀರ್ಣ (ಎಕರೆಗಳಲ್ಲಿ) | ಒಟ್ಟು ವಿಸ್ತೀರ್ಣ |
|---|---|---|---|
| ಹೂಟಗಳ್ಳಿ | <u>ಸಾಮಾನ್ಯ ವಲಯ</u> | | |
| | 66 ಮತ್ತು 67 | 19-00 | |
| | 71 ಮತ್ತು 72 | 5-00 | |
| | 69-ಎ-9 ಮತ್ತು 10 | 1.00 | |
| | 68 ಎಲ್ | 0.25 | |
| | 66 ಹೆಚ್ | 0.25 | |
| | 65 ಎ-9 | 0.25 | |
| | 66-ಜಿ | 0-25 | |
| | 68-ಎಂ | 0-25 | |
| | 68 ಎನ್ | 0-25 | |
| | 68-ಟಿ | 0-25 | |
| | 34-ಸಿ | 0-25 | |
| | 70-ಕೆ | 0-25 | |
| | 69-ಹೆಚ್ | 0-25 | |
| | 69-ಎ-8 | 0-50 | 28.75 |
| ಹೂಟಗಳ್ಳಿ | <u>ಆಹಾರ ವಲಯ</u> | | |
| " | 69-ಎ-8 | 0.50 | |
| " | 66-ಪಿ | 0.25 | |
| " | 66-ಕ್ಯೂ | 0.25 | |
| " | 66-ಓ | 0.25 | |
| " | 66-ವಿ | 0.25 | |
| " | 66-ಓ | 0.25 | |
| " | 77- | 0.25 | |
| " | 77-ಜಿ | 0.25 | |
| " | 77-ಐ | 0.25 | |
| " | 77-ಎಲ್ | 0.25 | |

| 1 | 2 | 3 | 4 | 5 |
|---|---|---|---|---|
| | ಹೂಟಗಳ್ಳಿ | 77-ಎಮ್ | 0-25 | |
| | " | 77-ಯು | 0-25 | |
| | " | 77-ವೈ | 0-25 | |
| | " | 77-ಬಿ | 0-25 | |
| | " | 78-ಇ | 0-25 | |
| | " | 78-ಜಿ | 0-25 | |
| | " | 78-ಹೆಚ್ | 0-25 | |
| | " | 78-ಐ | 0-25 | |
| | " | 78-ಜೆ | 0-25 | 5.50 |
| | ಹೆಬ್ಬಾಳ್ ಎಲಕ್ಟ್ರಾನಿಕ್ ಸಿಟಿ | | | |
| 01 | | 347-ಪಿ | 2-00 | |
| 02 | | 407 ರಿಂದ 409 | 10-00 | |
| 03 | | 348 | 29-00 | 41-00 |
| | ಹೆಬ್ಬಾಳ ಸಾಮಾನ್ಯ | | | |
| 01 | | 268-ಬಿ | 2-00 | |
| 02 | | 228-ಬಿ | 1-00 | |
| 03 | | 310 | 4-00 | |
| 04 | | 316, 317, 318 ಮತ್ತು 336 | 25-00 | |
| 05 | | 295-ಎ3 | 1-00 | |
| 06 | | 217-ಎ1 | 0-50 | |
| 07 | | 204-ಡಿ | 0-25 | |
| 08 | | 345-ಪಿ | 0-50 | |
| 09 | | 204-ಸಿ | 0-25 | 34-50 |
| | ಬೆಳಗೊಳ | ಪಾಲಿ ಇಲ್ಲ | | |
| | ಬೆಳವಾಡಿ | ಪಾಲಿ ಇಲ್ಲ | | |
| | | | ಒಟ್ಟು ವಿಸ್ತೀರ್ಣ | 109-75 |